ಪ್ರಶ್ನೆ. ೨೬೪(೭೩೧) ಶ್ರೀ ಬಾಬುರೆಡ್ಡಿ ವಿ. ತುಂಗಲ್.—(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಪ್ರಶ್ನೆ. ೨೬೬(೮೫೭) ಶ್ರೀ ಜಿ. ನಾರಾಯಣಕುಮಾರ್.—(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ ಮತ್ತು ಮೈಸೂರು ಸಕ್ಕರೆ ಕಾರ್ಖಾನೆಯು ಶೇರು ಪಡೆದಿರುವ ಬಗ್ಗೆ

೨೬೮(೬೦೭) ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಈ ಕೆಳಕಂಡ ಪ್ರಶ್ನೆಗಳಿಗೆ ಕೈಗಾರಿಕಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

ಅ) ಚಾಮುಂಡೇಶ್ವರಿ ಸಕ್ಕರೆ ಕಂಪನಿಯು ಅಧ್ಯಕ್ಷರು ಸರ್ಕಾರದೊಂದಿಗೆ ರಾಜ್ಯದ ಹಣಕಾಸು ಸಂಸ್ಥೆಗಳು ಉದಾಹರಣೆಗೆ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ ಹಾಗೂ ಮೈಸೂರು ಸಕ್ಕರೆ ಕಾರ್ಖಾನೆಯವರು ಖರೀದಿಸಿರುವ ಶೇರುಗಳನ್ನು ತಾವು ಖರೀದಿಸುವಂತೆ ಸರ್ಕಾರದ ದೊಂದಿಗೆ ಪರಿಶೀಲಿಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಜೆ. ಹೆಚ್. ಪಟೀಲ್(ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಇಲ್ಲ.

ಆ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

As on 29th January 1985,

Equity Shares—2,66,992 valued at Rs. 26,69,920 *i.e.*,

at 14% belongs to Shakti Area

Individuals.

Shakti Sugar Limited has 1,26,059 shares valued at

Rs. 12,60,590 *i.e.*, 6%.

So, 14% + 6% = 20% of it belonged to Shakti Area

Individuals and Shakti Sugar Limited.

Sri Chamundeswari Sugars : Individuals–Farmers–43,839 shares

valued at Rs. 4,38,390 *i.e.*, 2.40%.

There are financial institutions. They have invested 23% of shares (*i.e.*, Life Insurance Corporation, Unit Trust of India, Industrial Finance Corporation, Industrial Development Bank of India, Industrial Credit and Investment Corporation of India). Insurance companies owned 2% of shares.

State Financial Corporations like Karnataka State Industrial Investment and Development Corporation holds 7.46% of shares:

Canara Bank owned 0.2%,

Government Companies—2·74%

Public and Private Limited Companies, South India Investment and Financial Consultancy Limited—0.1%.

Farmers snare as on to-day : 2.40% of shares.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಮಂತ್ರಿಗಳು ಹೇಳಿದ ರೀತಿಯಲ್ಲಿ ಶಕ್ತಿ ಶುಗರ್ ಫ್ಯಾಕ್ಟರಿಯಲ್ಲಿ ೧೪.೬ ಶೇರುಗಳು ಏನು ಇವೆ ಅದು ಸಹ ರೈತರ ಶೇರುಗಳು.

ಶ್ರೀ ಜೆ.ಹೆಚ್. ಪಟೇಲ್.—ಹೌದು.

ಶ್ರೀ ಜಿ. ಮಾದೇಗೌಡ.—ಈ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ ಮಹಾಲಿಂಗಮ್ ಎಂಬುವರು ಛೇರ್ಮನ್ನರಾಗಿದ್ದಾರೆ. ಕೇವಲ ೧೦ ಸಾವಿರ ರೂಪಾಯಿಗಳ ಶೇರು ಮಾತ್ರ ಆ ಕಂಪನಿಯಲ್ಲಿ ಇರುತ್ತದೆ. ಆ ಕಂಪನಿಗೆ ಕೇಂದ್ರ ಸರ್ಕಾರದಿಂದ ೪೦ ಪರ್‌ಸೆಂಟ್ ಶೇರು ಇದೆ. ರೈತರ ಅಂದರೆ ಕಬ್ಬು ಬೆಳೆಗಾರರ ಶೇರು ಸುಮಾರು ೮೦ ಲಕ್ಷ ರೂಪಾಯಿಗಳದ್ದು ಇದೆ. ಹಾಗೆಯೇ ರಾಜ್ಯ ಸರ್ಕಾರದ್ದು ಸುಮಾರು ೧೦ ಪರ್‌ಸೆಂಟ್ ಶೇರಿನ ಇನ್‌ವೆಸ್ಟ್‌ಮೆಂಟ್ ಇದೆ. ಈ ಕಂಪನಿಗೆ ಸರ್ಕಾರದ ಶೇರು ೬೫ ಪರ್‌ಸೆಂಟ್ ಇರುವಾಗ ಕೇವಲ ೧೦ ಪರ್ಸೆಂಟ್ ಶೇರು ಹಾಕಿರತಕ್ಕಂತಹವರು ಫ್ಯಾಕ್ಟರಿಯ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ಅದನ್ನು ಹೇಗೆ ನಡೆಸಿಕೊಂಡು ಬರುತ್ತಿದ್ದಾರೆ? ಅದರ ಬಗ್ಗೆ ಮಾನ್ಯ ಮಂತ್ರಿಗಳಾದ ತಮಗೆ ಪತ್ರ ಬರೆದಾಗ ಆ ವಿಷಯವನ್ನು ತೀವ್ರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಉತ್ತರ ಕೊಟ್ಟಿದ್ದಾರೆ ಅವರು ಕೊಟ್ಟಿರತಕ್ಕ ಉತ್ತರವನ್ನು ನಾನು ಓದಲಿಕ್ಕೆ ಇಚ್ಛಿಪಡುತ್ತೇನೆ. ''ತಮ್ಮ ಪತ್ರದ ಕೋರಿಕೆ ಮೇರೆಗೆ ಭಾರತದ ಸಂವಿಧಾನಾತ್ಮಕ ದೃಷ್ಟಿಯಿಂದ ಕೆ.ಎಂ. ದೊಡ್ಡಿ ಪ್ರದೇಶದ ರೈತರ ಹಿತಾಸಕ್ತಿಯನ್ನು ಗಮನಿಸಿ ಕೆ.ಎಂ. ದೊಡ್ಡಿಯ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ವೃಂದದಲ್ಲಿ ಮಾರ್ಪಾಡು ತರಬೇಕೆಂಬ ತಮ್ಮ ಸಲಹೆಯನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು'' ಎಂದು ತಿಳಿಸಿದ್ದೀರಿ. ಆದರೆ ಇದುವರೆಗೆ ಏನು ಕ್ರಮ ಕೈಗೊಂಡಿಲ್ಲ. ಸಾಮಾನ್ಯವಾಗಿ ಫ್ಯಾಕ್ಟರಿಗಳಲ್ಲಿ ಯಾರದು ಹೆಚ್ಚು ಶೇರುಗಳು ಇರುತ್ತವೆಯೋ ಅಂತಹವರು ಆಡಳಿತವನ್ನು ನಡೆಸುವುದು ಪ್ರಜಾಪ್ರಭುತ್ವದ ತತ್ವ. ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಮಾನ್ಯ ಮಂತ್ರಿಯವರು ಸಹ ಯಾರದು ಬಹುಮತ ಇರುತ್ತದೆಯೋ ಅಂತಹವರಿಗೆ ಆಡಳಿತವನ್ನು ಕೊಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಕಾನ್ಸ್‌ಟ್ಯೂಷನ್ ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಸಹ ಪತ್ರದಲ್ಲಿ ಬರೆದಿದ್ದೀರಿ. ಅದರ ಬಗ್ಗೆ ತಮ್ಮ ಖಚಿತವಾದ ಅಭಿಪ್ರಾಯ ಏನು ?

ಶ್ರೀ ಜೆ.ಹೆಚ್. ಪಟೇಲ್.—ತಾವು ಪತ್ರವನ್ನು ಬರೆದಿದ್ದಿರಿ, ಅದಕ್ಕೆ ನಾನು ಉತ್ತರವನ್ನೂ ಕೊಟ್ಟಿದ್ದೇನೆ. ಆದಾದ ನಂತರ ನಾನು ಆ ಕಂಪನಿಯ ವ್ಯವಸ್ಥಾಪಕರಾದ ಮಹಾಲಿಂಗಮ್‌ರವರನ್ನು ಭೇಟಿ ಮಾಡಿ ವಿಷಯಗಳನ್ನು ಚರ್ಚೆ ಮಾಡಿದ್ದೇನೆ. ಈ ಕಂಪನಿಯನ್ನು ಮೊದಲಿಗೆ ಮಾನ್ಯ ಸದಸ್ಯರು ಕೋ-ಆಪರೇಟೀವ್ ಸೆಕ್ಟಾರ್ ಮೂಲಕ ನಡೆಸಲು ಪ್ರಯತ್ನ ಪಟ್ಟಿದ್ದರು. ಆದರೆ ಅದು ಆಗಲಿಲ್ಲ. ನಂತರ ಈ ಮಹಾಲಿಂಗಮ್‌ರವರು ಕಂಪನಿಯನ್ನು ವಹಿಸಿಕೊಂಡು ನಡೆಸಿಕೊಂಡು ಬರುತ್ತಿದ್ದಾರೆ. ಅದರ ಹಿಂದಿರತಕ್ಕ ಚರಿತ್ರೆಗೆ ನಾನು ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ಇವತ್ತು ರೈತರ ಹಿತಕ್ಕೆ ಪೂರಕವಾಗಿ ಕಾಲಾನಂತರ ರೈತರಿಗೇ ಇದು ಸೇರಬೇಕು ಎನ್ನತಕ್ಕಂತ ದ್ದನ್ನು ನಾನು ಒಪ್ಪುತ್ತೇನೆ. ಈಗ ಕಂಪನಿ ಚೆನ್ನಾಗಿ ನಡೆಯುತ್ತಿದೆ ಹಾಗೂ ರೆಕವರಿ ಚೆನ್ನಾಗಿ ಆಗಿದೆ. ಆ ಕಂಪನಿ ಬಗ್ಗೆ ಹೇಗೆ, ಎಷ್ಟು ದಿನಗಳೊಳಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ ಹಾಗೂ ಅವರನ್ನು ತಕ್ಷಣ ತೆಗೆದು ಹಾಕುವುದಕ್ಕಾಗುವುದಿಲ್ಲ. ಅಲ್ಲಿನ ರೈತರ ಸ್ಥಿತಿಗತಿ ಚೆನ್ನಾಗಿ ಆಗಲಿ ಎನ್ನುವ ಕಾರಣದಿಂದ ಡ್ರಾಸ್ಟಿಕ್ ಆಗಿ ಮೂಲಭೂತ ಉದ್ದೇಶದಿಂದ ಮ್ಯಾನೇಜ್‌ಮೆಂಟ್‌ನ್ನು ಬದಲಾವಣೆ ಮಾಡಬಾರದೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಜಿ. ಮಾದೇಗೌಡ.—ಫ್ಯಾಕ್ಟರಿ ಚೆನ್ನಾಗಿ ನಡೆಯುತ್ತಿದೆ, ಇಲ್ಲ ಎನ್ನತಕ್ಕ ವಿಷಯ ಅಲ್ಲ. ಇವತ್ತು ಯಾರು ಹೆಚ್ಚಿನ ಬಂಡವಾಳವನ್ನು ಹಾಕಿಕೊಂಡಿದ್ದಾರೆ ಅವರಿಗೆ ಅದರ ಆಡಳಿತದ ಜವಾಬ್ದಾರಿ ದೊರಕಬೇಕು. ಕೇವಲ ೧೦ ಸಾವಿರ ರೂಪಾಯಿಗಳ ಶೇರು ಹೊಂದಿರುವವರು ಆಡಳಿತ ಮಂಡಲಿಯಲ್ಲಿ ಇದ್ದಾರೆ ಆಡಳಿತ ಮಂಡಳಿಯನ್ನು ನಡೆಸತಕ್ಕ ಜವಾಬ್ದಾರಿಯನ್ನು ರೈತರಿಗೆ ಕೊಡಬೇಕು. ಇಲ್ಲಿ ರೈತರ ಶೋಷಣೆ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನೀವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರತಕ್ಕ

ವರು, ಮೆಜಾರಿಟಿ ಶೇರುಹೋಲ್ಡರುಗಳು ಯಾರು ಇರುತ್ತಾರೆ ಅಂಥವರಿಗೆ ಫ್ಯಾಕ್ಟರಿಯ ಆಡಳಿತವನ್ನು ಕೊಡಬೇಕು ಎನ್ನುತಕ್ಕಂತದ್ದು ನನ್ನ ಅಭಿಪ್ರಾಯ. ಜನರಲ್ ಬಾಡಿ ಮೀಟಿಂಗ್ ನಡೆದಂತಹ ಸಮಯದಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ೮೦ ಲಕ್ಷ ರೂಪಾಯಿ ಬಂಡವಾಳ ಹಾಕಿರತಕ್ಕ ರೈತರಿಗೆ ಫ್ಯಾಕ್ಟರಿಯ ಆಡಳಿತ ಹೋಗಬೇಕು.

ಶ್ರೀ ಜೆ.ಹೆಚ್. ಪಟೇಲ್.—ಈ ಕ್ರಷಿಂಗ್ ಸೀಸನ್ನು ಆಗುವವರೆಗೂ ಯಾವುದೇ ರೀತಿಯ ಕೆಲಸಗಳನ್ನು ತಡೆಯುವುದಕ್ಕೆ ಹೋಗುವುದಿಲ್ಲ. ಆಮೇಲೆ ಅದರ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇನ್ನು ದುಡ್ಡು ಯಾರದು ಜಾಸ್ತಿ ಇದೆ ಎಂದು ನೋಡಿದರೆ ಸರ್ಕಾರ ಸಂಸ್ಥೆಗಳು ಹಾಕಿರುವ ಹಣ ಶೇಕಡಾ ೬೦ ರಷ್ಟು ಜಾಸ್ತಿಯಾಗುತ್ತದೆ. ಮಹಾಲಿಂಗಪುರದ ಹಣ ಶೇಕಡಾ ೨೦ ಭಾಗ ಮಾತ್ರವಿದೆ ಅವರದು ಜಾಸ್ತಿ ಹಣ ಇಲ್ಲ ಅದನ್ನು ನಾನು ಒಪ್ಪುತ್ತೇನೆ. ರೈತರದು ಮತ್ತು ಸರ್ಕಾರಿ ಸಂಸ್ಥೆಗಳದು ಸೇರಿಸಿದರೆ ಅವರದು ಜಾಸ್ತಿ ಇಲ್ಲ. ಆದರೆ ಸಧ್ಯಕ್ಕೆ ಅಲ್ಲಿ ಯಾವುದೇ ರೀತಿಯ ವ್ಯವಸ್ಥೆಯನ್ನು ಬದಲಾವಣೆ ಮಾಡುವುದು ಸರಿಯಲ್ಲವೆಂದು ನನಗೆ ಅನಿಸಿದೆ. ಆದ್ದರಿಂದ ಅದನ್ನು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ಇನ್ನೊಂದು ಪ್ರಶ್ನೆ ಏನೆಂದರೆ

ಅಧ್ಯಕ್ಷರು.—ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ, ಈಗ ತಾವು ಕುಳಿತುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರಕಾಲದಲ್ಲಿಯೇ ಇದು ಬಗೆಹರಿಯಬೇಕು. ಎನ್ನುವುದೇನಿಲ್ಲ. ಆ ಬಗ್ಗೆ ಮಾನ್ಯ ಸದಸ್ಯರನ್ನು ಹಾಗೂ ಮಂಡ್ಯ ಜಿಲ್ಲೆಯ ಬೇರೆ ಇತರೆ ಸದಸ್ಯರುಗಳನ್ನೂ ಕೂರಿಸಿ ಈ ಬಗ್ಗೆ ವಿಚಾರ ಮಾಡಿ, ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಸ್.ಟಿ. ಜಯರಾಮ್.—ಚಾಮುಂಡೇಶ್ವರಿ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಈಗಾಗಲೇ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆಂದು ಕೈಗಾರಿಕಾ ಮಂತ್ರಿಯವರು ಹೇಳಿರುವುದು ಸರಿಯಾದುದಾಗಿದೆ. ರೈತರಿಗೆ ಕೊಡಬೇಕಾಗಿದ್ದ ೭೦ ಲಕ್ಷ ರೂಪಾಯಿಗಳನ್ನು ಕಂಪನಿಯವರು ಕೊಟ್ಟಿದ್ದಾರೆ. ಇನ್ನೂ ಒಂದೆರಡು ವಿಷಯಗಳನ್ನು ಸಕ್ಕರೆ ಕಾರ್ಖಾನೆಯವರು ಫೂರ್ಪಡಿಸಿಲ್ಲ. ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಂಡ್ಯ ಜಿಲ್ಲೆಯ ಶಾಸಕರನ್ನೆಲ್ಲಾ ಕರೆದು ವಿಚಾರ ಮಾಡಿ ಸಮಸ್ಯೆಗಳನ್ನು ಬಗೆಹರಿಸುವುದು ಒಳ್ಳೆಯದು. ಒಟ್ಟಿನಲ್ಲಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಬರೇ ಗಮನಿಸುವುದಷ್ಟೇ ಅಲ್ಲ, ಸಾಧ್ಯವಾದಷ್ಟು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಈ ಆಡಳಿತವನ್ನು ಬದಲಾವಣೆ ಮಾಡತಕ್ಕಂತಾದ್ದಾಗಲೀ, ಇರತಕ್ಕಂತಹ ಆಡಳಿತವನ್ನು ಮುಂದುವರಿಸಿಕೊಂಡು ಹೋಗತಕ್ಕಂತಾದ್ದು ಆಗಲೀ, ಅದು ನಮ್ಮ ಕೈಲಾಗಲೀ, ಅಥವಾ ನಿಮ್ಮ ಕೈಯಲ್ಲಾಗಲೀ ಆಗತಕ್ಕಂತಹ ವಿಷಯ ಅಲ್ಲ. ಅದರ ಬಗ್ಗೆ ಜನರಲ್ ಬಾಡಿಯವರು ನಿರ್ಧಾರ ತೆಗೆದುಕೊಳ್ಳಬೇಕು. ಅಲ್ಲಿ ಶೇರ್ಸ್ ಹಾಲಿರತಕ್ಕಂತಹವರು ನಿರ್ಧಾರ ತೆಗೆದುಕೊಳ್ಳತಕ್ಕಂತಹವರು. ಜನರಲ್ ಬಾಡಿ ಸೇರಿದಂತಹ ಕಾಲದಲ್ಲಿ ನಿಮ್ಮ ಸರಕಾರದ ಅಧಿಕಾರಿಗಳು ಏನಿದ್ದಾರೆ–ಅಂದರೆ ಬೋರ್ಡ್ ಆಫ್ ಡೈರೆಕ್ಟರ್ಸ್ ಅವರು ಹೆಚ್ಚಿಗೆ ಶೇರು ಇರುವಂತಹ ರೈತರಿಗೆ ಆ ಫ್ಯಾಕ್ಟರಿ ಆಡಳಿತ ಮಾಡುವುದಕ್ಕೆ, ತಾವು ಅಂದರೆ ಸರಕಾರದವರು ಸಹಾಯ ಮಾಡುವುದಕ್ಕೆ ತಯಾರಾಗಿದ್ದಾರೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಎಚ್ ಪಟೇಲ್.—ಮಾನ್ಯ ಸದಸ್ಯರು ಪುನಃ ಪುನಃ ಏನು ಪ್ರಸ್ತಾಪ ಮಾಡುತ್ತಾ ಇದ್ದಾರೆ ಅಂದರೆ ಅದರ ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಸಾಧ್ಯವಾದಷ್ಟು ರೈತ ಪ್ರತಿನಿಧಿಗಳು ಕಾರ್ಖಾನೆ ಆಡಳಿತಕ್ಕೆ ಹೋಗುವ ಹಾಗೆ ಸರಕಾರದ ಡೈರೆಕ್ಟರ್ಸ್ ಕೆಲಸ ಮಾಡಬೇಕು ಎಂದು ನಾನು ಆ ಪ್ರಿನ್ಸಿಪಲ್‌ನ್ನು ಒಪ್ಪುತ್ತೇನೆ. ಅದನ್ನು ಯಾವಾಗ ಮಾಡಬೇಕು, ಹೇಗೆ ಮಾಡಬೇಕು, ಎಂಬುದನ್ನು ಸರಕಾರಕ್ಕೆ ಬಿಡಿ.